ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು):

ಅ)

ವರ್ಷ	ಅನುದಾನ	ಮಾಡಿದ ಖರ್ಚು
	ಕೋಟಿ ರೂ.ಗಳಲ್ಲಿ	
1988-89	92.37	69.78
1989-90	119.86	91.95
1990-91	124.44	102.68

ಆ) ಇದಕ್ಕೆ ಬೇಕಾದ ಹಣ ಸುಮಾರು 1475 ಕೋಟಿ ರೂ.ಗಳಾಗಿರುತ್ತದೆ. (ಈ ವರ್ಷದ ಅನುದಾನ ರೂ. 140.47 ಕೋಟಿಗಳ ಹೊರತಾಗಿ) ಆದಷ್ಟು ಶೀಘ್ರವಾಗಿ ಮುಗಿಸಲು ಕ್ರಮ ಕೈಗೊಳ್ಳಲಾಗುವುದು.

ಅಧ್ಯಕ್ಷರು : ಮಂಡಿಸಲಾಯಿತು.

ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

1) ಕರ್ನಾಟಕ ರಾಜ್ಯದ ನರ್ಸಿಂಗ್ ಅಸೋಸಿಯೇಷನ್‌ನವರು ಸತ್ಯಾಗ್ರಹ ಮಾಡುತ್ತಿರುವ ಬಗ್ಗೆ ಹಾಗೂ ಏಡ್ಸ್ ರೋಗಕ್ಕೆ ತುತ್ತಾಗಿರುವ ಶ್ರೀಮತಿ ಸುಮಿತ್ರಾ ಅವರಿಗೆ ಸರ್ಕಾರದಿಂದ ಆರ್ಥಿಕ ಸಹಾಯ

+ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ): ಸನ್ಮಾನ್ಯ ಅಧ್ಯಕ್ಷರೆ, ಈ ದಿವಸ ಒಂದು ವಿಚಾರವನ್ನು ಸದನದಲ್ಲಿ ಪ್ರಸ್ತಾಪ ಮಾಡುವುದಕ್ಕಾಗಿ ತಮ್ಮ ಅಪ್ಪಣೆ ಕೋರಿದ್ದೆ. ಮಾನ್ಯ ಆರೋಗ್ಯ ಸಚಿವರ ಗಮನವನ್ನು ವಿಶೇಷವಾಗಿ ಮತ್ತು ಸರ್ಕಾರದ ಗಮನಕ್ಕೂ ಸಹಾ ಈ ಸಮಸ್ಯೆಯನ್ನು ತರಬೇಕೆಂದು ನಾನು ಬಯಸುತ್ತೇನೆ. ಬಹಳ ಮುಖ್ಯವಾಗಿ ಕರ್ನಾಟಕ ರಾಜ್ಯದ ನರ್ಸಿಂಗ್ ಅಸೋಷಿಯೇಶನ್‌ಗೆ ಸೇರಿದ ಹಾಗೂ ನಮ್ಮ ಸರ್ಕಾರಿ ಕ್ಷೇತ್ರದಲ್ಲಿ ಕೆಲಸ ಮಾಡತಕ್ಕಂಥ ಎಲ್ಲಾ ನರ್ಸ್‌ಗಳು, ಈ ರಾಜ್ಯದ ಸರ್ಕಾರಿ ಆಸ್ಪತ್ರೆಗಳಲ್ಲಿ ನಿನ್ನೆಯಿಂದ ಸತ್ಯಾಗ್ರಹ ಮಾಡುತ್ತಿದ್ದಾರೆ. ಇದರಿಂದ ರೋಗಿಗಳಿಗೆ ತೊಂದರೆಯಾಗತಕ್ಕಂಥ ಸಂಭವವಿದೆ. ಹಲವಾರು ವರ್ಷಗಳಿಂದ ಅವರ ಕೆಲವು ಬೇಡಿಕೆಗಳಿವೆ. ಅವುಗಳಲ್ಲಿ ಒಂದೆರಡು ಬೇಡಿಕೆಗಳು ಸರ್ಕಾರ ಪರಿಶೀಲನೆ ಮಾಡಲು ಯೋಗ್ಯವಾಗಿರತಕ್ಕಂಥವು ಮತ್ತು ಅರ್ಹವಾಗಿರತಕ್ಕಂಥವು. ಅವರು ಸುಮಾರು 16-17 ವರ್ಷಗಳ ಹಿಂದೆ ತಮ್ಮ "ವಾಷಿಂಗ್ ಅಲೊಯೆನ್ಸ್" ಹೆಚ್ಚು ಮಾಡಬೇಕೆಂದು ಕೇಳಿದ್ದರು. ಹಿಂದಿನ ಸರ್ಕಾರಗಳು ಆದನ್ನು ಮಾಡುತ್ತೇವೆಂದು ಇದುವರೆಗೂ ಭರವಸೆ ಕೊಡುತ್ತಾ ಬರುತ್ತಿದೆ ನಾನು ಆಗ ಆರೋಗ್ಯ ಮಂತ್ರಿಯಾಗಿದ್ದಾಗ ಭಾಗಶ: ಅವರ ಸಮಸ್ಯೆಗಳನ್ನು ಬಗೆಹರಿಸಲಿಕ್ಕೆ ಪ್ರಯತ್ನ ಮಾಡಿದ್ದೆ. ಆದರೂ ಕೆಲವು ಆಗಿಲ್ಲ. ಆದುದರಿಂದ, ಇವೊತ್ತು ಅವರು ಬೀದಿಗಿಳಿದು ಸತ್ಯಾಗ್ರಹ ಮಾಡುತ್ತಿದ್ದಾರೆ. ಇದರ ಬಗ್ಗೆ ಸರ್ಕಾರ ತೀವ್ರವಾಗಿ ಗಮನಹರಿಸಿ, ಅವರ ಪ್ರತಿನಿಧಿಗಳ ಜೊತೆ ಕುಳಿತುಕೊಂಡು ಚರ್ಚೆ ಮಾಡುವುದು ಮೊದಲನೆಯದು. ಇನ್ನು ಎರಡನೆಯದು, ಒಂದು ವರ್ಷದ ಹಿಂದೆ ಈ ಸದನದಲ್ಲಿ ಶಾಸಕರಾಗಿರತಕ್ಕ ಸನ್ಮಾನ್ಯ ಜೋಶಿಯವರು ಒಂದು ವಿಷಯವನ್ನು ಪ್ರಸ್ತಾಪ ಮಾಡಿದರು

SRI SUBHASH SRIDHAR JOSHI : Sir, last year I had raised a question regarding blood transfusion to a 25 years old lady, with AIDs virus during her operation at Mission Hospital, Miraj, And on the floor of the House, the then Health Minister assured that all possible help will be given to her. So far not a single doctor visited her house. Now, her husband is also suffering from AIDS. She is a pregnant of a child. I do not know about the future of that child. Not a single rupee has come as help from the Government. She is Sumithra Heggammavar and her husband is Vasant(32 years) and they are from Athini. There was lot of 'galata' from our marathi people and now the Mission Hospital is giving some help. My request is that the Joint Director, or DHO or any other Senior Health Department Officers in Belgaum should be sent to Miraj today only from our State. For no fault of her, the whole family is destroyed. I have learnt that Mr. Vasanth is also suffering from paralysis attack. He is a coolie and belongs to SC community. I demand a statement from the Government by tomorrow or by today evening, as to what the Government is going to do. I also request the Chief Minister to release at least Rs. 10,000 or 20,000 immediately as there is no livelihood for her family. I want an answer from the Hon'ble Health Minister.

+ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೆ, ಈ ನರ್ಸಿಂಗ್ ಅಸೋಸಿಯೇಷನ್ ಅವರು ಪ್ರತಿವರ್ಷವೂ ಸರ್ಕಾರಕ್ಕೆ ಅವರ ಸಮಸ್ಯೆಗಳ ಬಗ್ಗೆ ಮೊರೆ ಇಡುತ್ತಿದ್ದಾರೆ. ಅವರ ಸಮಸ್ಯೆಯನ್ನು.....

ಅಧ್ಯಕ್ಷರು : ಅವರು ಏಡ್ಸ್ ಬಗ್ಗೆ ಮಾತನಾಡುತ್ತಿದ್ದಾರೆ. ಅದು ಮುಗಿದುಬಿಡಲಿ..

ಶ್ರೀ ಎಸ್.ಎಸ್. ಜೋಶಿ : ನನಗೆ ಉತ್ತರ ಬೇಕು.

ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಆರೋಗ್ಯ ಅಸೋಷಿಯೇಷನ್ಸ್ ಇದೆ. ಒಂದು ಅಸೋಷಿಯೇಷನ್ ನಮ್ಮ ಹತ್ತಿರ ಬಂದು ಮಾತನಾಡಿ ಒಪ್ಪಿಕೊಂಡು ಹೋದರು. ಇನ್ನೊಂದು ಅಸೋಷಿಯೇಷನ್ ಸ್ಟ್ರೈಕ್ ಮಾಡುತ್ತಿದ್ದಾರೆಂದು ಕೇಳಿದ್ದೇನೆ. ಅವರನ್ನೂ ಕೂಡ ಕರೆದು ನಾವು ಮಾತನಾಡಿ ಇದಕ್ಕೆ ಕೊಡಲೇ ಒಂದು ತೀರ್ಮಾನ ತೆಗೆದುಕೊಳ್ಳುತ್ತೇನೆಂಬ ಭರವಸೆಯನ್ನು ಕೊಡಬಯಸುತ್ತೇನೆ. ಮಾನ್ಯ ಸಿಂಧ್ಯರವರು ಹೇಳಿದ ಹಾಗೆ ಒಂದು ಬೇಡಿಕೆಯನ್ನು ಈಡೇರಿಸುವುದು ಸರ್ಕಾರಕ್ಕೆ ಕಷ್ಟವೇನು ಇಲ್ಲ. ಅವರು ಕೇಳುವುದು ಸಹಜವಿದೆ.

ಡ್ರೆಸಿಂಗ್ ಅಲೋಯನ್ಸ್ ಬಗ್ಗೆ ನಾನು ಒಪ್ಪುತ್ತೇನೆ. ಅವರು ಖಾಲಿ ಹುದ್ದೆಗಳನ್ನು ಭರ್ತಿಮಾಡಬೇಕು. ಮತ್ತು ಇತರೇ ಬೇಡಿಕೆಗಳ ಬಗ್ಗೆ ಕೇಳುತ್ತಿದ್ದಾರೆ. ಅದು ನಮ್ಮ ಸರ್ಕಾರದ ಆರ್ಥಿಕ ಪರಿಸ್ಥಿತಿಯನ್ನು ಅವಲಂಬನೆಯಾಗಿದೆ.

ಶ್ರೀ ವಾಟಾಳ್ ನಾಗರಾಜ್ : ತಾವು ಅವರನ್ನು ಕರೆದು ಮಾತನಾಡಿ. ಒಟ್ಟಿನಲ್ಲಿ ಒಂದು ಒಳ್ಳೆಯ ವಾತಾವರಣ ನಿರ್ಮಾಣ ಮಾಡಿ.

SRI D.B. CHANDREGOWDA : The Minister should request the concerned to withdraw the strike. ಅವರು ಅದನ್ನಾದರೂ ಮಾಡದಿದ್ದರೆ, ಅವರನ್ನು ಕರೆದು ಮಾತನಾಡುತ್ತೇವೆ, ಸತ್ಯಾಗ್ರಹವನ್ನು ವಾಪಸ್ಸು ತೆಗೆದುಕೊಳ್ಳಿ ಎಂದಾದರೂ ಹೇಳಬೇಕಲ್ಲ.

ಶ್ರೀ ಜಿ. ಪುಟ್ಟಸ್ವಾಮಿ ಗೌಡ : ಈಗಾಗಲೇ ನಾನು ಮುಷ್ಕರವನ್ನು ಹಿಂದಕ್ಕೆ ತೆಗೆದುಕೊಳ್ಳಿ ಎಂದು ಒಂದುಕರೆಯನ್ನು ಕೊಟ್ಟಿದ್ದೇವೆ. ಈಗಲೂ ಕೂಡ ತಮ್ಮ ಮೂಲಕ ಅವರಲ್ಲಿ ನಾನು ವಿನಂತಿಸಿಕೊಳ್ಳುತ್ತೇನೆ. ಪ್ರಾರ್ಥಿಸಿಕೊಳ್ಳುತ್ತೇನೆ, ಅವರು ಕೂಡಲೇ ಮುಷ್ಕರವನ್ನು ನಿಲ್ಲಿಸಿ ನಮ್ಮ ಜೊತೆ ಮಾತುಕತೆಗೆ ಬರಬೇಕು. ನಾವು ಹೇಗಿದ್ದರೂ ಅವರ ಬೇಡಿಕೆಗಳನ್ನು ಪರಿಶೀಲಿಸುವುದಕ್ಕೆ ಸಿದ್ಧರಿದ್ದೇವೆ. ಅವರು ಆಸ್ಪತ್ರೆಯ ಕೆಲಸಕಾರ್ಯಗಳನ್ನು ಉತ್ತಮವಾದ ರೀತಿಯಲ್ಲಿ ನಡೆಸಿಕೊಂಡು ಹೋಗಬೇಕೆಂದು ತಮ್ಮ ಮೂಲಕ ವಿನಂತಿಸಿಕೊಳ್ಳುತ್ತಿದ್ದೇನೆ.

2) ವಿಷಯ : ಬೆಳಗಾಂ, ಹುಬ್ಬಳ್ಳಿ ಮತ್ತು ರಾಜ್ಯದ ವಿವಿಧ ಭಾಗಗಳಲ್ಲಿ ಗಣೇಶ ಮೂರ್ತಿ ವಿಸರ್ಜನೆ ಸಮಯದಲ್ಲಿ ಗಲಭೆ.

+ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ): ಸನ್ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಅನುಮತಿಯನ್ನು ಕೇಳಿದ್ದೇನೆ. ಬೆಳಗಾವಿ, ಹುಬ್ಬಳ್ಳಿ ಮತ್ತು ರಾಜ್ಯದ ವಿವಿಧ ಭಾಗಗಳಲ್ಲಿ ಗಣೇಶ ಮೂರ್ತಿ ವಿಸರ್ಜನೆ ಸಮಯದಲ್ಲಿ ಸಾಕಷ್ಟು ಗಲಾಟೆಗಳಾಗಿವೆ. ಪೋಲೀಸ್ ಲಾಟಿ ಚಾರ್ಜ್ ಆಗಿವೆ. ಮತ್ತು ಗೋಲಿಬಾರ್ ಆಗಿದೆ. ಟಿಯರ್ ಗ್ಯಾಸ್ ಸೆಲ್ ಉಪಯೋಗ ಮಾಡಿದ್ದಾರೆ. ಈಗತಾನೆ ಬೆಳಗಾಂನಿಂದ ನನಗೆ ಫೋನ್ ಬಂದಿತ್ತು. ಅಲ್ಲಿಯ ಪರಿಸ್ಥಿತಿ ಚೆನ್ನಾಗಿಲ್ಲ. ಅಲ್ಲಿ ಬಹಳಷ್ಟು ಶಾಪ್‌ಗಳನ್ನು ಲೂಟಿ ಮಾಡಿದ್ದಾರೆ, ಕಲ್ಲು ತೂರಾಟ ಮಾಡಿದ್ದಾರೆ. ಇದರಿಂದಾಗಿ ಬೆಳಗಾಂನಲ್ಲಿ ಪೋಲೀಸ್ ಕಮೀಷನರ್ ಅವರು ಗಾಯಗೊಂಡಿದ್ದಾರೆ. ಮತ್ತು ಹುಬ್ಬಳ್ಳಿ ಶಾಸಕರು ಗಾಯಗೊಂಡಿದ್ದಾರೆಂದು ನಾನು ಪತ್ರಿಕೆಯಲ್ಲಿ ಓದಿದ್ದೇನೆ. ಬೆಳಗಾಂನಲ್ಲಿ ಸನ್ನ ಇನ್‌ಫಾರ್‌ಮೇಶನ್ ಪ್ರಕಾರ 2-3 ಜನಸತ್ತಿದ್ದಾರೆ. ಆದರೆ ಪತ್ರಿಕೆಯಲ್ಲಿ ಒಂದು ಎಂದು ಬಂದಿದೆ. ಇವತ್ತು ಸರ್ಕಾರದಿಂದ ಯಾವುದೇ ಕ್ರಮವನ್ನು ಇದರ ಬಗ್ಗೆ ತೆಗೆದುಕೊಳ್ಳುವುದಕ್ಕೆ ಆಗಿಲ್ಲ. ಬೆಳಗಾಂನಲ್ಲಿ ಎಂತಹ ವಾತಾವರಣ ಇದೆಯೆಂದರೆ ಅಲ್ಲಿ ಇನ್‌ಡಿಸ್ಕ್ರಿಮಿನೇಟ್ ಅರೆಸ್ಟ್ ಮಾಡುತ್ತಿದ್ದಾರೆ. ಮನೆ ಮನೆಗೆ ಹೋಗಿ ಅರಸ್ಟ್ ಮಾಡುತ್ತಿದ್ದಾರೆ. ಬೆಳಗಾಂ ಪೇಪರ್‌ನಲ್ಲಿ ಏನು ಹಾಕಿದ್ದಾರೆಂದರೆ ಮನೆಯಿಂದ ಹೊರಗೆ ಹೋದ ಮನುಷ್ಯ ವಾಪಸ್ಸು ಬರಲಿಲ್ಲವೆಂದರೆ ಅವರು ಕೂಡಲೇ ಪೋಲೀಸ್‌ರವರಿಗೆ ಜೊತೆ ಮಾತನಾಡಬೇಕಾಗಿದೆ. ಇನ್‌ಡಿಸ್ಕ್ರಿಮಿನೇಟ್ ಅರೆಸ್ಟ್ ಮಾಡಿದ್ದಾರೆ. ಕಠಿಣವಾದಂತಹ ಪರಿಸ್ಥಿತಿ ಬೆಳಗಾಂನಲ್ಲಿದೆ. ಇವತ್ತು ಪ್ರಾಪರ್ಟೀಸ್ ಡ್ಯಾಮೇಜ್ ಆಗಿದ್ದು, ಅದನ್ನು ಸರ್ಕಾರದಿಂದ ಯಾವುದೇ ರೀತಿ ಅಸೆಸ್‌ಮೆಂಟ್ ಮಾಡುತ್ತಾ ಇಲ್ಲ, ಹೀಗಾದರೆ ಹೇಗೆ? ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಗೃಹಸಚಿವರು ಸ್ಪಷ್ಟ ಹೇಳಿಕೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಯಾರು ಇನೋಸೆಂಟ್ ಇದ್ದಾರೆ, ಅವರಿಗೆ ಯಾವ ರೀತಿಯ ಅಪಾಯವೂ ಆಗಬಾರದು; ಕೂಡಲೇ ಅವರ ಬಿಡುಗಡೆಯಾಗಬೇಕು. ಇವತ್ತು ಬೆಳಗಾಂನಲ್ಲಿ ಭಯದ ವಾತಾವರಣ ನಿರ್ಮಾಣವಾಗಿದೆ. ಎಲ್ಲೆಲ್ಲಿ ಶಾಪ್‌ಗಳು ಲೂಟಿಯಾಗಿವೆ. ಅದರ ಅಸೆಸ್‌ಮೆಂಟ್ ಆಗಬೇಕು. ಅವರಿಗೆ ಕಾಂಪೆನ್‌ಸೇಷನ್ ಕೊಡಬೇಕು. ಅಲ್ಲಿ ಸಾಕಷ್ಟು ಜನ ಇನಜೂರ್ಡ್ ಆಗಿದ್ದಾರೆ, ಅವರಿಗೆ ಮೆಡಿಕಲ ಟ್ರೀಟ್‌ಮೆಂಟ್ ಮತ್ತು ಕಾಂಪನಸೇಷನ್ ಕೊಡಬೇಕಾಗುತ್ತದೆ. ಮತ್ತು ಯಾರು